ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೯**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತೊಂಬತ್ತನೇ ಅಧಿವೇಶನ**

**ಗುರುವಾರ, ದಿನಾಂಕ: ೦೯ನೇ ಜುಲೈ, ೨೦೧೫**

---

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು

೩. ಗೃಹ ಸಚಿವರು

೪. ನಗರಾಭಿವೃದ್ಧಿ ಸಚಿವರು

೫. ಸಣ್ಣ ಕೈಗಾರಿಕೆ ಸಚಿವರು

---

## ಸಿವಿಲ್ ಪೊಲೀಸರಿಗೆ ವಸತಿ ಸೌಲಭ್ಯ ನೀಡುವ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೧ (೧೧೨೦) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯಾದ್ಯಂತ ಇರುವ ಪೊಲೀಸ್ ಪೇದೆಗಳ ಸಂಖ್ಯೆ ಎಷ್ಟು ;

(ಆ) ರಾಜ್ಯಾದ್ಯಂತ ಇರುವ ಪೊಲೀಸ್ ವಸತಿ ಗೃಹಗಳ ಸಂಖ್ಯೆ ಎಷ್ಟು ;

(ಇ) ಪ್ರತಿಯೊಬ್ಬ ಪೊಲೀಸ್ ಪೇದೆಗಳಿಗೂ ವಸತಿ ಸೌಕರ್ಯ ಕಲ್ಪಿಸುವ ಉದ್ದೇಶ ಸರ್ಕಾರದ ಮುಂದಿದೆಯೇ ;

(ಈ) ಇದ್ದಲ್ಲಿ, ೨೦೧೫–೧೬ನೇ ಸಾಲಿನಲ್ಲಿ ವಸತಿ ಸೌಕರ್ಯ ಒದಗಿಸಲು ಮೀಸಲಿಟ್ಟಿರುವ ಹಣವೆಷ್ಟು ?

## ಅಧಿಕಾರಿಗಳ ಮೇಲಿನ ಆರೋಪಗಳ ಬಗ್ಗೆ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) –**

೧೨೨ (೧೦೫೫) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೨ ವರ್ಷಗಳಲ್ಲಿ ರಾಜ್ಯದ ಎಷ್ಟು ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್., ಕೆ.ಎ.ಎಸ್. ಮತ್ತು ಕೆ.ಎಫ್.ಎಸ್. ಅಧಿಕಾರಿಗಳ ಮೇಲೆ ಭ್ರಷ್ಟಾಚಾರ, ಕರ್ತವ್ಯ ಲೋಪ ಮತ್ತಿತರ ಪ್ರಕರಣಗಳು ದಾಖಲಾಗಿವೆ ; (ಪ್ರಕರಣವಾರು, ಅಧಿಕಾರಿವಾರು ವಿವರ ನೀಡುವುದು)

(ಆ) ಇಂತಹ ಪ್ರಕರಣಗಳಲ್ಲಿ ಎಷ್ಟು ಅಧಿಕಾರಿಗಳ ಮೇಲೆ ಎಫ್.ಐ.ಆರ್. ದಾಖಲಾಗಿದೆ ; ಎಷ್ಟು ಪ್ರಕರಣಗಳಲ್ಲಿ ಆರೋಪ ಪಟ್ಟಿ ಸಲ್ಲಿಸಲಾಗಿದೆ ; (ಪ್ರಕರಣವಾರು, ಅಧಿಕಾರಿವಾರು ವಿವರ ನೀಡುವುದು)

(ಇ) ಎಷ್ಟು ಜನ ಅಧಿಕಾರಿಗಳ ಮೇಲಿನ ಆರೋಪಗಳನ್ನು ಸರ್ಕಾರವು ತಿರಸ್ಕರಿಸಿ, ಲೋಕಾಯುಕ್ತರಿಗೆ ಅನುಮತಿ ನಿರಾಕರಿಸಿದೆ ? (ಅಂತಹ ಪ್ರತಿಯೊಂದು ಪ್ರಕರಣದ ಅಧಿಕಾರಿಯ ಹೆಸರು, ಪದನಾಮ, ಆರೋಪ ಮತ್ತು ಅನುಮತಿ ನಿರಾಕರಣೆಗೆ ಕಾರಣ ಸಹಿತ ವಿವರ ನೀಡುವುದು)

## ''ಅಟಲ್ ಬಿಹಾರಿ ವಾಜಪೇಯಿ'' ವಸತಿ ಬಡಾವಣೆ ಹಂಚಿಕೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೧೨೩ (೧೪೮೫) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ''ಅಟಲ್‌ಬಿಹಾರಿ ವಾಜಪೇಯಿ'' ವಸತಿ ಬಡಾವಣೆ ನಿರ್ಮಾಣಗೊಂಡು ನಿವೇಶನ ಹಂಚಿಕೆಗಾಗಿ ಅರ್ಜಿ ಆಹ್ವಾನಿಸಿ ಎರಡು ವರ್ಷ ಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಸ್ವೀಕೃತವಾದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು ; (ಸದರಿ ಬಡಾವಣೆಯ ಲೇಔಟ್ ಪ್ಲಾನ್ ಸಹಿತ ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ಇಲ್ಲಿಯವರೆಗೆ ಅರ್ಜಿದಾರರಿಗೆ ನಿವೇಶನ ಹಂಚಿಕೆಯಾಗದೆ ಇರುವುದಕ್ಕೆ ಕಾರಣವೇನು ;

(ಇ) ಸದರಿ ಬಡಾವಣೆಯ ಅರ್ಜಿದಾರರಿಗೆ ಯಾವ ಕಾಲಮಿತಿ ಒಳಗಡೆ ನಿವೇಶನ ಹಂಚಿಕೆ ಮಾಡಲಾಗುವುದು ? ವಿವರ ನೀಡುವುದು ?

## ಎಸ್.ಸಿ.ಪಿ. ಯೋಜನೆ ಅಡಿಯಲ್ಲಿ ಎಸ್‌ಸಿ/ಎಸ್‌ಟಿ ಯವರಿಗೆ ನೀಡುತ್ತಿರುವ ಸೌಲಭ್ಯದ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೪ (೧೯೮) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶು ಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪಶುಸಂಗೋಪನೆ ಇಲಾಖಾ ವತಿಯಿಂದ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ವರ್ಗದವರಿಗೆ ನೀಡಲಾಗುತ್ತಿರುವ ಹಣ ಡಿಸೆಂಬರ್ ನಂತರ ಬಿಡುಗಡೆಯಾಗುತ್ತಿದ್ದು, ಈ ಹಣ ಮಾರ್ಚ್ ಅಂತ್ಯದವರೆಗೆ ಖರ್ಚಾಗದೆ ಉಳಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ವಿಶೇಷ ಘಟಕ ಯೋಜನೆ ಅಡಿಯಲ್ಲಿ ನೀಡುವ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಲು ಇಲಾಖೆಯು ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಂಡಿದೆ;

(ಇ) ವಿಶೇಷ ಘಟಕ ಯೋಜನೆ ಅಡಿಯಲ್ಲಿ ಬಿಡುಗಡೆ ಮಾಡುವ ಹಣವನ್ನು ವರ್ಷದ ಆರಂಭದಲ್ಲಿ ಬಿಡುಗಡೆ ಮಾಡಲು ಇರುವ ಅಡಚಣೆ ಏನು ?

## ಪೊಲೀಸ್ ಸಿಬ್ಬಂದಿಗಳಿಗೆ ಹೆಚ್ಚುವರಿ ಒತ್ತಡದ ಕೆಲಸ ಹೇರಿರುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೫ (೧೧೨೪) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯ ಪೊಲೀಸ್ ಇಲಾಖೆಯಲ್ಲಿರುವ ಒಟ್ಟು ಹುದ್ದೆಗಳೆಷ್ಟು ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಹಿರಿಯ/ಕಿರಿಯ ಅಧಿಕಾರಿಗಳ ಸಂಖ್ಯೆ ಎಷ್ಟು ; (ಹುದ್ದೆವಾರು, ಜಿಲ್ಲಾವಾರು ವಿವರ ನೀಡುವುದು)

(ಆ) ಕಿರಿಯ ಪೊಲೀಸ್ ಸಿಬ್ಬಂದಿಗಳನ್ನು (ಕಾನ್‌ಸ್ಟೇಬಲ್) ಐಪಿಎಸ್ ಮತ್ತು ಹಿರಿಯ ಶ್ರೇಣಿ ಅಧಿಕಾರಿಗಳ ಮನೆ ಕೆಲಸಕ್ಕೆ ನಿಯೋಜನೆ ಮಾಡುತ್ತಿರುವುದು ನಿಜವೇ ; ಅಂತಹ ಪ್ರಕರಣಗಳಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಇಲಾಖೆಯ ಸಿಬ್ಬಂದಿಗಳನ್ನು ಕೆಲವು ಹಿರಿಯ ಅಧಿಕಾರಿಗಳ ಮನೆ ಕೆಲಸಕ್ಕೆ ನಿಯುಕ್ತಿಗೊಳಿಸಿದ ಹಿನ್ನೆಲೆಯಲ್ಲಿ ಕೆಲವು ಠಾಣೆಗಳಲ್ಲಿ ಸಿಬ್ಬಂದಿ ಕೊರತೆ ಉಂಟಾಗಿ ಪಾಳಿಯಲ್ಲಿ ಪುನಃ ಪುನಃ ನಿಯಮ ಮೀರಿ ಕೆಲಸ ಮಾಡಿಸುತ್ತಿರುವುದು ನಿಜವೇ ;

(ಈ) ಇಂತಹ ಪ್ರಕರಣಗಳನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಹಾಲು ಉತ್ಪಾದಕರಿಗೆ ನೀಡುತ್ತಿರುವ ಪ್ರೋತ್ಸಾಹ ಧನದ ಕುರಿತು

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೬ (೧೪೯೭) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೪–೧೫ನೇ ಸಾಲಿನಲ್ಲಿ ಹಾಲು ಉತ್ಪಾದಕರಿಗೆ ನೀಡುವ ಪ್ರೋತ್ಸಾಹ ಧನದ ಒಟ್ಟು ಮೊತ್ತ ಎಷ್ಟು ; ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಪ್ರೋತ್ಸಾಹ ಧನ ನೀಡಲಾಗಿದೆ ; (ವಿವರ ನೀಡುವುದು)

(ಆ) ಹಾಲು ಉತ್ಪಾದಕರಿಗೆ ನೀಡುವ ಪ್ರೋತ್ಸಾಹ ಧನವನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಂದ ಗ್ರಾಮಗಳ ಪಿ.ಕೆ.ಪಿ.ಎಸ್. ಬ್ಯಾಂಕುಗಳ ಮೂಲಕ ಒದಗಿಸಲಾಗುವುದೇ ; (ವಿವರ ನೀಡುವುದು)

(ಇ) ಇಲ್ಲದಿದ್ದಲ್ಲಿ, ಕಾರಣ ಏನು ?

## ಸಾರಾಯಿ ರಾಜಸ್ವ ಬಾಕಿ ವಸೂಲಿ ಕುರಿತು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೭ (೧೦೫೮) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಕಳೆದ ಏಳು ವರ್ಷಗಳ ಹಿಂದೆ ಸಾರಾಯಿ ಮಾರಾಟ ನಿಷೇಧಗೊಂಡಾಗ ಸಾರಾಯಿ ಮಾರಾಟ ಟೆಂಡರ್ ಪಡೆದ ಗುತ್ತಿಗೆದಾರರು ಸರ್ಕಾರಕ್ಕೆ ಪಾವತಿಸಬೇಕಾದ ರಾಜಸ್ವ ಎಷ್ಟು ; (ಬಡ್ಡಿ ಸಹಿತ ವಿವರ ನೀಡುವುದು)

(ಆ) ಸಾರಾಯಿ ನಿಷೇಧಗೊಂಡಾಗ ಕೂಡಲೇ ರಾಜಸ್ವ ವಸೂಲಿ ಮಾಡದಿರಲು ಕಾರಣವೇನು ; ಗುತ್ತಿಗೆದಾರರ ಬ್ಯಾಂಕ್ ಗ್ಯಾರಂಟಿ, ಆಸ್ತಿಯನ್ನು ವಾಪಸ್ಸು ಪಡೆಯಲು ಅವಕಾಶ ಮಾಡಿಕೊಡಲು ಕಾರಣವೇನು ;

(ಇ) ರಾಜಸ್ವ ವಸೂಲಿಯ ನೆಪದಲ್ಲಿ ಇಲಾಖೆಯಿಂದ ಖರ್ಚುಮಾಡಿರುವ ಮೊಬಲಗೆಷ್ಟು ; ಸರ್ಕಾರಕ್ಕೆ ರಾಜಸ್ವ ನಷ್ಟ ಉಂಟು ಮಾಡಲು ಅವಕಾಶ ಮಾಡಿಕೊಟ್ಟಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಬೆಳಗಾವಿ ನಗರದಲ್ಲಿ ಸುಲಭ್ ಶೌಚಾಲಯಗಳು

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೧೨೮ (೧೦೭೭) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಳಗಾವಿ ನಗರದ ಮುಖ್ಯ ಬೀದಿಗಳಲ್ಲಿ ಶೌಚಾಲಯ/ಸುಲಭ್ ಶೌಚಾಲಯಗಳು ಸಾಕಷ್ಟು ಪ್ರಮಾಣದಲ್ಲಿ ಇಲ್ಲದೆ, ವ್ಯಾಪಾರಿಗಳು, ವರ್ತಕರು, ಸಕ್ಕರೆ ಕಾಯಿಲೆಯ ರೋಗಿಗಳು, ಜಲಬಾಧೆಯಿರುವವರು ತೀವ್ರ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ನಗರದ ಪಟ್ಟಣದ ಬೀದಿಗಳಲ್ಲಿ ಅಗತ್ಯವಿರುವಷ್ಟು ಸುಲಭ್ ಶೌಚಾಲಯಗಳನ್ನು ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೧೨೯ (೧೫೦೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇದುವರೆಗೆ ಬಡಾವಣೆಗಾಗಿ ಸ್ವಾಧೀನ ಪಡಿಸಿಕೊಂಡ ಜಮೀನಿನ ವಿಸ್ತೀರ್ಣ ಎಷ್ಟು ;

(ಆ) ಈ ಜಮೀನಿನಲ್ಲಿ ಎಷ್ಟು ನಿವೇಶನಗಳನ್ನು ಮಾಡಿ ಹಂಚಲಾಗಿದೆ ; (ಬಡಾವಣೆವಾರು ವಿವರ ನೀಡುವುದು)

(ಇ) ಈ ಜಮೀನನ್ನು ಸ್ವಾಧೀನಪಡಿಸಿಕೊಂಡು ಇದುವರೆಗೂ ಉಪಯೋಗಿಸದೆ, ಬಡಾವಣೆ ನಿರ್ಮಿಸದೆ ಇರುವ ಜಮೀನಿನ ವಿಸ್ತೀರ್ಣ ಎಷ್ಟು ? (ಬಡಾವಣೆವಾರು ವಿವರ ನೀಡುವುದು)

## ಮೈಸೂರು ಮತ್ತು ಚಾಮರಾಜನಗರಗಳಲ್ಲಿ ಸಣ್ಣ ಕೈಗಾರಿಕೆಗಳ ಸ್ಥಾಪನೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೩೦ (೧೦೬೦) ಸಣ್ಣ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೪–೧೫ನೇ ಸಾಲಿನಲ್ಲಿ ಮೈಸೂರು ಮತ್ತು ಚಾಮರಾಜನಗರಗಳ ವ್ಯಾಪ್ತಿಯಲ್ಲಿ ಹೊಸದಾಗಿ ಸಣ್ಣ ಕೈಗಾರಿಕೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆಯೇ; (ಇವುಗಳ ವಿವರ ನೀಡುವುದು)

(ಆ) ಕರ್ನಾಟಕ ಸಣ್ಣ ಕೈಗಾರಿಕೆ ನಿಗಮದಿಂದ ಸದರಿ ಜಿಲ್ಲೆಗಳಲ್ಲಿ ಹಂಚಿಕೆ ಮಾಡಿರುವ ಕೈಗಾರಿಕಾ ಶೆಡ್‌ಗಳ ಸಂಖ್ಯೆ ಎಷ್ಟು ; ಹಾಗೂ ಇನ್ನೂ ಹಂಚಿಕೆ ಮಾಡಲು ಬಾಕಿ ಇರುವ ಕೈಗಾರಿಕಾ ಶೆಡ್‌ಗಳ ಸಂಖ್ಯೆ ಎಷ್ಟು ? (ವಿವರ ನೀಡುವುದು)

## ಸಹಾಯಕ ಅಭಿಯಂತರರ ನಿಗೂಢ ಸಾವು

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೩೧ (೧೦೮೪) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಾರವಾರ ಜಿಲ್ಲೆಯ ಮುಂಡಗೋಡ ತಾಲ್ಲೂಕಿನ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಹಾಯಕ ಅಭಿಯಂತರರ ಸಾವು ಸಂಶಯಾಸ್ಪದವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಆ) ಈ ಸಂಶಯಾಸ್ಪದ ಸಾವಿನ ಕುರಿತು ಉನ್ನತ ಮಟ್ಟದ ತನಿಖೆ ನಡೆಸುವಂತೆ ಅಲ್ಲಿಯ ಗ್ರಾಮಸ್ಥರು, ಸಮಾಜ ಬಾಂದವರು ಹಾಗೂ ವಿವಿಧ ಸಂಘ ಸಂಸ್ಥೆಗಳು, ತಹಶೀಲ್ದಾರರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಈ ಬಗ್ಗೆ ಸರ್ಕಾರ ಮಾಡಿರುವ ತನಿಖೆಯೇನು ; (ವಿವರ ನೀಡುವುದು)

(ಇ) ಈ ಸಂಶಯಾಸ್ಪದ ಸಾವಿನ ಹಿಂದೆ ಯಾರ ಕೈವಾಡವಿರುವುದೆಂದು ಸರ್ಕಾರ ಬಹಿರಂಗ ಪಡಿಸುವುದೇ ? (ವಿವರ ನೀಡುವುದು)

## ಬೆಂಗಳೂರಿನ ಬೆಳ್ಳಂದೂರು ಕೆರೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

೧೩೨ (೧೦೭೦) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶು ಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರಿನ ಬೆಳ್ಳಂದೂರು ಮತ್ತು ಅಗರ ಕೆರೆಗಳ ನಡುವೆ ಅಕ್ರಮವಾಗಿ ಮತ್ತು ನಿಯಮ ಮೀರಿ ಕಟ್ಟಡ ನಿರ್ಮಿಸಿ, ರಾಜ ಕಾಲುವೆ ಸೇರಿದಂತೆ ಕೆರೆಗಳ ಜಲಮೂಲಗಳಿಗೆ ಹಾನಿ ಮಾಡಿರುವ 'ಮಂತ್ರಿ ಟೆಕ್ ಜೋನ್ ಪ್ರೈವೇಟ್ ಲಿ., ಮತ್ತು 'ಕೋರ್ ಮೈಂಡ್ ಸಾಫ್ಟ್‌ವೇರ್ ಅಂಡ್ ಸರ್ವಿಸ್ ಪ್ರೈವೇಟ್ ಲಿ' ಕಂಪನಿಗಳಿಗೆ ಅನುಕ್ರಮವಾಗಿ ತಲಾ ರೂ. ೧೧೭.೩೫ ಮತ್ತು ೨೨.೫ ಕೋಟಿಗಳ ದಂಡವನ್ನು ವಿಧಿಸಿ, ಸರ್ವೋಚ್ಛ ನ್ಯಾಯಾಲಯದ ರಾಷ್ಟ್ರೀಯ ಹಸಿರು ನ್ಯಾಯಪೀಠ ಆದೇಶ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ದಂಡದ ಮೊತ್ತವನ್ನು ಈ ಸಂಸ್ಥೆಗಳು ಪಾವತಿಸಬೇಕು. ಮಂಡಳಿಯು ಈ ಮೊತ್ತವನ್ನು ಬಳಸಿ ಎರಡು ಕಂಪನಿಗಳು ಉಂಟುಮಾಡಿರುವ ಕೆರೆಗಳ ಜಲಮೂಲ ಮತ್ತಿತರ ಪರಿಸರ ಹಾನಿಯನ್ನು ನಿವಾರಿಸಿ, ಪರಿಸರ ಪುನಃಶ್ಚೇತನಗೊಳಿಸಬೇಕೆಂದು ಸದರಿ ಆದೇಶದಲ್ಲಿ ಸೂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಉನ್ನತ ಮಟ್ಟದ ಸಮಿತಿಯೊಂದನ್ನು ರಚನೆ ಮಾಡಿ, ಬೆಂಗಳೂರಿನ ಇತರ ಕೆರೆಗಳ ಒತ್ತುವರಿ ಮತ್ತು ಜಲಮೂಲಗಳ ಬಗ್ಗೆ ಅಧ್ಯಯನ ಮಾಡಿ ವರದಿ ನೀಡುವಂತೆ ಸದರಿ ನ್ಯಾಯಾಲಯ ಸೂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಉನ್ನತ ಮಟ್ಟದ ತಜ್ಞರ ಸಮಿತಿ ಅಧ್ಯಯನ ನಡೆಸಿ ವರದಿ ಸಲ್ಲಿಸುವವರೆಗೆ ಬೆಂಗಳೂರಿನಲ್ಲಿ ಕೆರೆಗಳ ಸುತ್ತಮುತ್ತಲ ಪ್ರದೇಶಗಳಲ್ಲಿ ಯಾವುದೇ ಹೊಸ ಕಟ್ಟಡ ನಿರ್ಮಾಣ ಕಾರ್ಯಗಳಿಗೆ ಅನುಮೋದನೆ ನೀಡದಂತೆ ವಿವಿಧ

ಸಕ್ಷಮ ಪ್ರಾಧಿಕಾರಿಗಳಿಗೆ ಸೂಚನೆ ನೀಡುರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಮೇಲಿನ ಎಲ್ಲಾ ವಿಷಯಗಳಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ವರದಿ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೧೩೩ (೧೪೯೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ತನ್ನ ವರದಿ ಮಾರ್ಚ್–೨೦೧೪ಕ್ಕೆ ಒಳಗೊಂಡಂತೆ ಹಲವಾರು ಅವ್ಯವಹಾರಗಳು, ಹೆಚ್ಚುವರಿ ಹಣಪಾವತಿ, ನಷ್ಟಗಳು ಇತ್ಯಾದಿ ಬಗ್ಗೆ ವರದಿ ನೀಡಿರುವುದು ನಿಜವೇ ;

(ಆ) ಹಾಗಿದ್ದರೆ, ಅಂತಹ ಅವ್ಯವಹಾರಗಳ ವಿವರಗಳೇನು ;

(ಇ) ಆ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ? (ವಿವರ ನೀಡುವುದು)

## ರೇಷ್ಮೆ ಬೆಳೆಗಾರರಿಗೆ ಸರ್ಕಾರ ನೀಡುತ್ತಿರುವ ಪ್ರೋತ್ಸಾಹ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೩೪ (೧೧೪೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರೇಷ್ಮೆ ಬೆಳೆಗಾರರಿಗೆ ರಾಜ್ಯ ಸರ್ಕಾರ ನೀಡಿರುವ ವಿವಿಧ ಸೌಲಭ್ಯಗಳೇನು ; ರೇಷ್ಮೆ ಬೆಳೆಗಾರರ ಸಾಲ ಮನ್ನಾ ಮಾಡುವ ಸಾಧ್ಯತೆಗಳಿವೆಯೇ ಅಥವಾ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲು ಸರ್ಕಾರವು ಉದ್ದೇಶಿಸಿದೆಯೇ; ಇದ್ದಲ್ಲಿ, ಇದು ಯಾವಾಗಿನಿಂದ ಜಾರಿಗೆ ಬರುತ್ತದೆ ;

(ಆ) ರೇಷ್ಮೆ ಬೆಳೆಗಾರರಿಗೆ ಕಳೆದ ಎರಡು ವರ್ಷಗಳಿಂದ ಎಷ್ಟು ಸಬ್ಸಿಡಿ ನೀಡಲಾಗಿದೆ ಮತ್ತು ಎಷ್ಟು ಪ್ರಮಾಣದ ಇಳುವರಿ ಬಂದಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು) ರೈತರಿಗೆ ಸಬ್ಸಡಿ ದೊರೆಯಬೇಕಾದರೆ ವಿಧಿಸಿರುವ ಮಾನದಂಡಗಳೇನು ; (ವಿವರ ನೀಡುವುದು)

(ಇ) ಅದೇ ರೀತಿ ರಾಜ್ಯದಲ್ಲಿ ರೇಷ್ಮೆ ಕೃಷಿಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರವು ಯಾವುದಾದರೂ ಯೋಜನೆಗಳನ್ನು ಕೈಗೊಂಡಿದೆಯೇ ; (ವಿವರ ನೀಡುವುದು) ಈ ಕೃಷಿಗೆ ಕೇಂದ್ರದಿಂದ ನೀಡಿರುವ ಪ್ರೋತ್ಸಾಹ ಅನುದಾನ ಎಷ್ಟು ? (ವರ್ಷವಾರು ಮಾಹಿತಿ ನೀಡುವುದು)

## ಬೆಂಗಳೂರು ನಗರದಲ್ಲಿ ವಾಹನ ತಪಾಸಣೆ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೩೫ (೧೦೭೨) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ನಗರದಲ್ಲಿ ವಾಹನ ತಪಾಸಣಾ ಹೆಸರಿನಲ್ಲಿ ವಾಹನ ಸವಾರರಿಗೆ ಕಿರುಕುಳ ನೀಡುವುದರ ಜೊತೆಗೆ ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿದ್ದು, ಇದನ್ನು ನಿವಾರಿಸಲು ಸರ್ಕಾರ ಕೈಗೊಳ್ಳುವ ವೈಜ್ಞಾನಿಕ ಕ್ರಮಗಳೇನು ;

(ಆ) ಕಳೆದ ೨ ವರ್ಷಗಳಿಂದ ಟ್ರಾಫಿಕ್ ನಿಯಮ ಉಲ್ಲಂಘನೆಯಿಂದ ವಾಹನ ಮಾಲೀಕರಿಗೆ ಹಾಕಿರುವ ದಂಡವೆಷ್ಟು ; (ಪ್ರತಿ ಮಾಸಿಕವಾರು ವಿವರ ನೀಡುವುದು)

(ಇ) ಟ್ರಾಫಿಕ್ ನಿಯಮ ಉಲ್ಲಂಘನೆ ಮಾಡಿದ ಸವಾರರಿಗೆ ದಂಡ ಹಾಕುವ ಪ್ರಕ್ರಿಯೆಯನ್ನು, ಆಯಾಕಟ್ಟಿನ ಜಾಗದಲ್ಲಿ ಸಿ.ಸಿ.ಟಿ.ವಿ. ಅಳವಡಿಸಿ ದಾಖಲು ಮಾಡುವ ವ್ಯವಸ್ಥೆ ಜಾರಿಗೆ ತಂದು, ಮೇಲ್ಕಂಡ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಸುವರ್ಣ ಸೌಧ, ಬೆಳಗಾವಿ, ಪಿ7, ಕಾ.ಸೂ. , ಪ್ರತಿಗಳು 1500